ಊಟ ಮಾಡಿಬಿಡುತ್ತೇನೆ. ಆಫೀಸಿಗೆ ಮಧ್ಯಾಹ್ನಕ್ಕೆ ಎಲ್ಲಿಂದಲೋ ಊಟ ಬರುವ ಏರ್ಪಾಡು ಮಾಡಲಾಗಿದೆ. ಪ್ರತಿನಿತ್ಯ ಕಾರ್ ಡ್ರೈವರ್ ಶಂಕರಪ್ಪ ಬಂದು ನನ್ನ ಹೆಂಡತಿ ಕೊಟ್ಟ ಕಾಫಿ ಕುಡಿದು ನನ್ನ ಆಫೀಸ್ ಬ್ಯಾಗನ್ನು ತಾನೇ ಕಾರಲ್ಲಿ ಇಡುವುದು ರೂಢಿಯಾಗಿದೆ. ಶಂಕರಪ್ಪನಿಗೆ ಕಾಫಿ ಕೊಡುತ್ತಾ, "ಇವೊತ್ತು ಸಾಹೇಬರು ಒಂಥರಾ ಇದಾರೆ ಯಾಕೊ ಹುಷಾರು ಶಂಕರಪ್ಪ..." ಎಂದು ಹೇಳಿದ್ದು ರೂಮಿನಲ್ಲಿದ್ದ ನನಗೆ ಸ್ಪಷ್ಟವಾಗಿ ಕೇಳಿಸಿತ್ತು. ಹೋಗಿ ಕಾರಿನಲ್ಲಿ ಕುಳಿತಿದ್ದೆ. ನನ್ನ ಮಟ್ಟಿಗೆ ನಾನು ಆಲ್‌ರೈಟ್ ಆಗಿದ್ದೆ. ಆದರೆ ರಾತ್ರಿ ಬಿದ್ದ ಕನಸು ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿರಬಹುದೆಂಬ ಅನುಮಾನ ಬಲವಾಗತೊಡಗಿದೆ. ಏಕೆಂದರೆ ಬೆಳಿಗ್ಗೆ ಎದ್ದಾಗಿನಿಂದ ಆಫೀಸಿಗೆ ಹೊರಡುವ ಹೊತ್ತಿಗೆ ಕನಿಷ್ಠ ಮೂರು ಸಿಗರೇಟುಗಳನ್ನು ಸೇದುತ್ತಿದ್ದೆ. ಆದರೆ ಇಂದು ಸಿಗರೇಟು ಸೇದುವುದನ್ನೇ ಮರೆತುಹೋಗಿದ್ದೆ! ಸೇದಬೇಕೆಂದು ಅನ್ನಿಸುತ್ತಿಲ್ಲ ಕೂಡ. ಕಾರಿನ ಮಿರರ್‌ನಲ್ಲಿ ಡ್ರೈವರ್ ಕದ್ದು ಕದ್ದು ನೋಡುತ್ತಿದ್ದದ್ದು ಹಿಂದಿನ ಸೀಟಿನಲ್ಲಿ ಕುಳಿತಿದ್ದ ನನ್ನ ಗಮನಕ್ಕೆ ಬಂದಿತ್ತು. ಅವನು ಕಾಫಿ ಕುಡಿಯುತ್ತಿದ್ದಾಗ ನನ್ನ ಹೆಂಡತಿಯು ಹೇಳಿದ ಮಾತುಗಳಿಂದ ಡ್ರೈವರ್ ಹಾಗೆ ನೋಡುತ್ತಿರಬೇಕೆಂದು ನೆಗ್ಲೆಕ್ಟ್ ಮಾಡಿದ್ದೆ ನಾನು.

ನನ್ನ ಚೇಂಬರ್‌ನಲ್ಲಿ ಕುಳಿತು ಫೈಲುಗಳ ಮೇಲೆ ಕಣ್ಣಾಡಿಸುತ್ತಿದ್ದೆ. ಅಂಡರ್ ಸೆಕ್ರೇಟರಿ ಪವನ್‌ಕುಮಾರ್ ಕೈಯ್ಯಲ್ಲೊಂದು ಫೈಲು ಹಿಡಿದುಕೊಂಡು ಪ್ರವೇಶಿಸಿದ್ದನು. ಪವನ್‌ಕುಮಾರ್ ತುಂಬಾ ಇಂಟೆಲಿಜೆಂಟ್ ಮನುಷ್ಯ. ವ್ಯವಹಾರಗಳಲ್ಲಿ ತುಂಬಾ ನಿಪುಣ ಎಂದು ಹೆಸರು ಗಳಿಸಿದ್ದಾನೆ. ಎಂಥ ಡೆಡ್ ಫೈಲಿನಲ್ಲೂ ಕಾಸು ಉದುರಿಸುವಂಥ ಅದ್ಭುತ ಜಾಣ್ಮೆಯನ್ನು ಕರಗತ ಮಾಡಿಕೊಂಡಿರುವ ಆಸಾಮಿ. ಆಫೀಸಿನಲ್ಲಿ ಸೆಕ್ರೇಟರಿಯವರಿಂದ ಹಿಡಿದು ಪಿವೋನ್ ವರೆಗೂ ಪವನ್‌ಕುಮಾರನನ್ನು ಕಂಡರೆ ಪ್ರೀತಿ ಮತ್ತು ಅಕ್ಕರೆ. ಎಲ್ಲಾ ಫೈಲುಗಳೂ ಸ್ಟಾರ್ಟ್ ಆಗುವುದು ಅವನ ಸಿಗ್ನೇಚರ್‌ನಿಂದಲೇ. ಎಲ್ಲಾ ಆದೇಶಗಳು ಹೊರಡುವುದು ಅವನ ಸಹಿಯಾದ ನಂತರವೇ. ಜೊತೆಗೆ ಯಾರೇ ಬಂದರೂ ಸೆಟಲ್ಮೆಂಟ್ ಮಾಡುವುದು ಅವನೇ. ಕಡತಗಳಲ್ಲಿ ಏನೇ ಬಂದರೂ ಸೆಕ್ರೇಟರಿಯಿಂದಿಡಿದು ಪಿವೋನ್ ವರೆಗೂ ಯಾರಿಗೆ ಎಷ್ಟೆಷ್ಟು ಸೇರಬೇಕೋ ಅದನ್ನು ನ್ಯಾಯಬದ್ಧವಾಗಿ ಸೇರಿಸುತ್ತಾನೆ. ಹಾಗಾಗಿ ಇಲಾಖೆಯ ಎಲ್ಲರೂ ಕ್ಷೇಮ. ಕೆಲವು ಫೈಲುಗಳ ವಿಷಯಗಳಲ್ಲಿ ಕೆಲವೊಮ್ಮೆ ಎಂಎಲ್‌ಎ ಮತ್ತು ಮಿನಿಸ್ಟರ್‌ಗಳು ಡೈರೆಕ್ಟಾಗಿ ಪವನ್ ಕುಮಾರನೊಂದಿಗೆ ಮಾತನಾಡುತ್ತಾರೆ. "ಕೂತ್ಕೊಳಿ ಪವನ್..." ಎಂದಿದ್ದೆ. ಮೇಲಧಿಕಾರಿ ಹೇಳುವವರೆಗೂ ಕೆಳಗಿನವರು ಕೂತುಕೊಳ್ಳದಿರುವುದು ಗೌರ್ಮೆಂಟ್ ಇಲಾಖೆಗಳಲ್ಲಿ ರೂಢಿಯಿರುವ ಪ್ರೊಟೊಕಾಲ್ ಪದ್ಧತಿ. ಅದು ಬ್ರಿಟಿಷ್ ಆಡಳಿತದಲ್ಲಿ ಇದ್ದ ಕಾನೂನು. ಏಕೆಂದರೆ ಆಗಿನ ಕಾಲದಲ್ಲಿ ಉನ್ನತಾಧಿಕಾರದಲ್ಲಿ ಇದ್ದವರೆಲ್ಲ ಬ್ರಿಟಿಷರೇ. ಇವೊತ್ತಿಗೂ ಬ್ರಿಟಿಷ್ ಕಾಲದ ಅನೇಕ ಕಾನೂನು ಕಟ್ಟಳೆಗಳನ್ನು ಕಣ್ಮುಚ್ಚಿಕೊಂಡು ನಮ್ಮ ಆಡಳಿತದಲ್ಲಿ ಪಾಲಿಸಿಕೊಂಡು ಬಂದಿದ್ದೇವೆ. ಇದು ಒಂದು ರೀತಿಯಾಗಿ ಬ್ಯುರೊಕ್ರೆಸಿಗೆ ನಿರಂತರವಾಗಿ ಅನುಕೂಲಕರವಾಗಿಯೇ ಪರಿಣಮಿಸಿದೆ. ಪವನ್‌ಕುಮಾರ್ ನನ್ನನ್ನು ಒಂಥರಾ ನೋಡುತ್ತಾ ಮುಂದಿನ ಛೇರ್‌ನಲ್ಲಿ ಕುಳಿತುಕೊಂಡಿದ್ದ. "ಸರ್ ಇವೊತ್ತು ಈ ಫೈಲು ಕ್ಲಿಯರ್ ಮಾಡ್ಬೇಕು..." ಎಂದು ಕೈಯಲ್ಲಿದ್ದ ಫೈಲನ್ನು ನನ್ನ ಮುಂದೆ ಇಟ್ಟಿದ್ದ. ನಾನು ಫೈಲನ್ನು ಕ್ಷಣ ತಿರುವಿ ಹಾಕಿದ್ದೆ. ಉತ್ತರ ಕರ್ನಾಟಕದ ವಾಟರ್ ಪೈಪ್ ಲೈನ್‌ಗೆ ಸಂಬಂಧ ಪಟ್ಟಿದ್ದು. ಮೂವತ್ತು ಕೋಟಿಯ ಪ್ರಾಜೆಕ್ಟ್. "ಏನ್ರಿ ಪವನ್ ಕುಮಾರ್ ಇಷ್ಟೊಂದು ಫಂಡ್ ಇನ್ವಾಲ್ವಮೆಂಟ್ ಇದೆ. ಇದರ ಬಗ್ಗೆ ಒಂದಿಷ್ಟು ಕಂಪ್ಲೇಂಟ್ಸ್ ಕೂಡಾ ಇದ್ದವಲ್ಲ..." ಎಂದು ಅವನ ಮುಖ ನೋಡಿದ್ದೆ. ಪವನ್‌ಕುಮಾರ್ ಕೆನ್ನೆ